ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಸವಕಲ್ಯಾಣ

C. C. No.839/2022

CW.1-PW.1

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:- ದಿನಾಂಕ: 31.01.2024

| | |
|---|---|
| ಸಾಕ್ಷಿಯ ಹೆಸರು:- | ಜೈಪಾಲ್ |
| ತಂದೆ ಹೆಸರು :- | ಬಾಬುರಾವ್ ಭೋಸ್ಲೆ |
| ವಯಸ್ಸು :- | 30 ವರ್ಷ |
| ಉದ್ಯೋಗ :- | ಹೋಟೆಲ್ ವ್ಯಾಪಾರ |
| ವಾಸ ಸ್ಥಳ :- | ರಾಜೋಳಾ ಗ್ರಾಮ |

**<u>ಮುಖ್ಯ ವಿಚಾರಣೆ</u>: ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ.4 ಇವರು ನನ್ನ ಸಹೋದರ, ಚಾಸಾ.5 ಇವರು ನನ್ನ ದೊಡ್ಡಪ್ಪನ ಮಗ, ಚಾಸಾ.6 ಇವರು ನನ್ನ ಚಿಕ್ಕಪ್ಪನ ಮಗ, ಚಾಸಾ.7 ಇವರು ನನ್ನ ತಂದೆ, ಚಾಸಾ.8 ಇವರು ನನ್ನ ಚಿಕ್ಕಮ್ಮ, ಚಾಸಾ.9 ಇವರು ನನ್ನ ದೊಡ್ಡಮ್ಮ, ಚಾಸಾ.10 ಇವರು ನನ್ನ ಸಹೋದರ ಸಂಬಂಧಿ, ಚಾಸಾ.11 ಇವರು ನನ್ನ ಅತ್ತಿಗೆ, ಚಾಸಾ.12 ಇವರು ನನ್ನ ಚಿಕ್ಕಮ್ಮ, ಚಾಸಾ.13 ಇವರು ನನ್ನ ಚಿಕ್ಕಪ್ಪ ಇರುತ್ತಾರೆ. ಚಾಸಾ.14, 15 ಇವರು ನನಗೆ ಪರಿಚಯ ಇರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ಸಹ ನನಗೆ ಪರಿಚಯ ಇರುತ್ತಾರೆ.

2022 ನೇ ವರ್ಷದಲ್ಲಿ 9 ನೇ ತಾರೀಖಿನಂದು ಮದ್ಯಾನ 4.00 ರಿಂದ 5.00 ಗಂಟೆ ಸುಮಾರಿಗೆ ಆರೋಪಿ ನಂ.6 ಉತ್ತಮ ಇವರು ಅಮೀತ್ ಇವರ ಜೊತೆ ನನ್ನ ಅಂಗಡಿಗೆ ಸಿಗರೇಟ್ ತೆಗೆದುಕೊಳ್ಳಲು ಬಂದಿದ್ದರು. ಆಗ ನಾನು ಅವರಿಗೆ ಸಿಗರೇಟ್ ನೀಡಿ, ಅದರ ಹಣ ರೂ.44/- ನೀಡುವಂತೆ ಅವರಿಗೆ ಕೇಳಿರುತ್ತೇನೆ. ಆಗ ಅಮೀತ್ ಇವರು ಫೋನ್ ಪೇ ಮೂಲಕ ಸದರಿ ಹಣ ಪಾವತಿ ಮಾಡಿರುತ್ತಾರೆ. ಆಗ ಆರೋಪಿ ನಂ.6 ಉತ್ತಮ ಇವರು ಅವಾಚ್ಯ ಶಬ್ದಗಳಿಂದ ಬೈಯಲು ಶುರು ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ.10 ಸುಭಾಷ್ ಇವರು ನನ್ನ ಅಂಗಡಿಗೆ ಬೀಡಿ ಖರೀದಿಸಲು ಬಂದಿದ್ದು, ಆಗ ಆರೋಪಿ ನಂ.6 ಉತ್ತಮ ಇವರು ಚಾಸಾ.10 ಇವರಿಗು ಸಹ ಬೈಯಲು ಶುರು ಮಾಡಿರುತ್ತಾರೆ. ಆಗ ಒಟ್ಟು 15 ಜನ ಆರೋಪಿತರು ಒಟ್ಟಾಗಿ ನನ್ನ ಜೊತೆ ಜಗಳ ತೆಗೆದು, ಆರೋಪಿ ನಂ.5 ನೀಲಂಕರ್ ಇವರು ನನ್ನ ಅಂಗಿ ಹಿಡಿದು ಅಂಗಡಿಯಿಂದ ಹೊರಗೆ ಎಳೆದುಕೊಂಡು ಬಂದು, ಆರೋಪಿ ನಂ.3 ಅಭಯಂಕರ್ ಇವರು ಕೈಯಿಂದ ನನ್ನ ಕೈ ತಿರುವಿ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.5 ನೀಲಂಕರ್ ಇವರು ಕೈಗಳಿಂದ ಹಲ್ಲೆ ಮಾಡಿ, ಕಾಲಿನಿಂದ ಒದ್ದಿರುತ್ತಾರೆ. ಆಗ ನನ್ನ ಅಣ್ಣ ಚಾಸಾ.4 ನಾಮದೇವ್ ಇವರು ಬಂದು, ಆರೋಪಿತರಿಗೆ ಕೇಳುತ್ತಿರುವಾಗ, ಆಗ ಆರೋಪಿ ನಂ.1 ನೀಲಕಂಠ ಮತ್ತು 14 ಬಸವರಾಜ್ ಇವರು ಕೈಗಳಿಂದ ಚಾಸಾ.4 ಇವರಿಗೆ ಹಲ್ಲೆ ಮಾಡಿರುತ್ತಾರೆ. ಆಗ ಆರೋಪಿತರು ತಮ್ಮ ಕೈಗಳಲ್ಲಿ ಬಡಿಗೆ ಹಿಡಿದುಕೊಂಡು ಬಂದು, ಆರೋಪಿ ನಂ.3 ಅಭಯಂಕರ್ ಇವರು ಕಟ್ಟಿಗೆಯಿಂದ ನನ್ನ ಬೆನ್ನಿಗೆ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.2 ವೆಂಕಟ್ ಇವರು ನನ್ನ ಶರ್ಟ್ ಹಿಡಿದು ಎದೆಯ ಮೇಲೆ ಕಾಲಿಟ್ಟಿರುತ್ತಾರೆ. ಆ ಸಮಯದಲ್ಲಿ ನನ್ನ ಚಾಸಾ.4 ರಿಂದ 12 ಇವರು

ಜಗಳ ಬಿಡಿಸಲು ಬಂದಾಗ, ಆರೋಪಿತರು ಅವರಿಗೆ ಸಹ ಹಲ್ಲೆ ಮಾಡಿರುತ್ತಾರೆ. ಆ ನಂತರ ನಾನು 6.00 ಗಂಟೆಗೆ ಠಾಣೆಗೆ ಬಂದು ದೂರು ನೀಡಿರುತ್ತೇನೆ. ಆ ನಂತರ ನಮ್ಮನ್ನು ಆಸ್ಪತ್ರೆಗೆ ಉಪಚಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಮರು ದಿನ ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಬರೆದು, ಹಲ್ಲೆ ಮಾಡಲು ಬಳಸಿದ ಬಡಿಗೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 6 ಕಟ್ಟಿಗೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು-ಮಾ.1 ರಿಂದ 6 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಲು ಎ.ಪಿ.ಪಿ., ರವರು ಅನುಮತಿ ಕೋರಿರುತ್ತಾರೆ, ಆ ಪ್ರಕಾರ ಅನುಮತಿ ನೀಡಲಾಯಿತು.

**<u>ಪಾಟೀ ಸವಾಲು</u> :-ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಜಗಳ ನಡೆಯುವಾಗ ಚಾಸಾ.13 ರಿಂದ 15 ಸ್ಥಳದಲ್ಲಿದ್ದು ಅವರು ಜಗಳ ಬಿಡಿಸಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲು</u>**: ಆರೋಪಿತರ ಪರ: ಶ್ರೀ. ಜಿ. ಎ. ಕೆ. ವಕೀಲರಿಂದ.

ಆರೋಪಿತರ ಜಾಗವನ್ನು ನಾನು ಕಬ್ಜಾ ಮಾಡಲು ಹೋಗಿದ್ದೆವು ಎಂದರೆ ಸರಿಯಲ್ಲ. ನಾನು ದೂರನ್ನು ಬಾಯಿ ಮಾತಿನಲ್ಲಿ ಹೇಳಿರುತ್ತೇನೆ. ದೂರಿನಲ್ಲಿ ಏನು ಬರೆದಿರುತ್ತದೆ ಎಂದರೆ, ಸಾಕ್ಷಿ ನಾನು ಹೇಳಿದ್ದನ್ನೆ ಬರೆದಿರುತ್ತಾರೆಂದು ನುಡಿಯುತ್ತಾರೆ. ದೂರನ್ನು ಬರೆದ ನಂತರ ನನಗೆ ಓದಿ ಹೇಳಿರುತ್ತಾರೆ. ಆರೋಪಿತರು ನನಗೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೋ.ಸೈಕಲಿನ ಮೇಲೆ ಹೋಗುವಾಗ ಬಿದ್ದು ಗಾಯಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಆರೋಪಿತರ ವಿರುದ್ದ ದ್ವೇಷ ಸಾಧಿಸಲು ನಾನು ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಕಟ್ಟಿಗೆಗಳು ಗಂಡು ಆರೋಪಿತರ ಕೈಯಲ್ಲಿದ್ದವು. ನಾನು ಹೇಳಿರುವಂತೆ ಯಾವದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮೊಂದಿಗೆ ಜಗಳ ತೆಗೆದಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಕಟ್ಟಿಗೆಯಿಂದ ಮತ್ತು ಕೈಗಳಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-